# <u>ತಿದ್ದುಪಡಿ ಪ್ರಕಟಣೆ</u>

ಸಂ: ಹಿಂವಕಇ/ಬಿ3/ಸಿಆರ್-91/2015-16 ದಿನಾಂಕ:27-06-2017

**<u>ಮೈಸೂರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆ ತಯಾರಕರು ಮತ್ತು ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.</u>**

ಅಧಿಸೂಚನೆ ಸಂಖ್ಯೆ:ಹಿಂವಕಇ/ಬಿ3/ಸಿಬ್ಬಂದಿ/ಸಿಆರ್-91/2015-16 ದಿನಾಂಕ:20-10-2016ರನ್ವಯ ದಿನಾಂಕ: 25-10-2016 ರಿಂದ (ದಿನಾಂಕ ವಿಸ್ತರಿಸಿದ ನಂತರ) 30-11-2016 ರವರೆಗೆ ಅಡುಗೆ ತಯಾರಕರು ಮತ್ತು ಅಡುಗೆ ಸಹಾಯಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಮ್ಮ ಎಸ್.ಎಸ್.ಎಲ್.ಸಿ ಅಂಕಗಳ ಜೇಷ್ಠತೆ ಆಧಾರದ ಮೇಲೆ ಸ್ವೀಕೃತಿಯಾಗಿರುವ ಅರ್ಜಿಗಳಲ್ಲಿ 1:5 ಅನುಪಾತದಲ್ಲಿ ದಿನಾಂಕ:22-06-2017ರಂದು ಅಡುಗೆಯವರ ಹುದ್ದೆಗೆ ಹಾಗೂ ದಿನಾಂಕ:23-06-2017ರಂದು ಅಡುಗೆ ಸಹಾಯಕರ ಹುದ್ದೆಗೆ ದಾಖಲಾತಿಗಳನ್ನು ಪರಿಶೀಲಿಸಲು ಆಹ್ವಾನಿಸಲಾಗಿತ್ತು. ಸದರಿ ದಿನದಂದು ದಾಖಲಾತಿಗಳನ್ನು ಪರಿಶೀಲಿಸಲು ಹಾಜರಾಗಿರುವ ಅಭ್ಯರ್ಥಿಗಳ ಪೈಕಿ ಅರ್ಹ ಅಭ್ಯರ್ಥಿಗಳನ್ನು 1:3 ಅನುಪಾತದಲ್ಲಿ ಪ್ರಾಯೋಗಿಕ ಪರೀಕ್ಷೆಗೆ ದಿನಾಂಕ: 28-06-2017 ರಂದು ಅಡುಗೆಯವರಿಗೆ ಹಾಗೂ ದಿನಾಂಕ:29-06-2017ರಂದು ಅಡುಗೆ ಸಹಾಯಕರಿಗೆ ಆಹ್ವಾನಿಸಲಾಗಿತ್ತು. ಆದರೆ, ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಹಿಂವಕ/90/ಬಿಇಟಿ/2016 ಭಾಗ-2 ದಿನಾಂಕ:27-06-2017ರನ್ವಯ ಸದರಿ ದಿನಾಂಕಗಳನ್ನು ಮುಂದೂಡಿ, ಈ ಕೆಳಕಂಡಂತೆ ದಿನಾಂಕ ಮತ್ತು ಸ್ಥಳವನ್ನು ನಿಗಧಿಪಡಿಸಲಾಗಿರುತ್ತದೆ.

| ಹುದ್ದೆಗಳ ವಿವರ | ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಬೇಕಾದ ದಿನಾಂಕ | ಸಮಯ | ಸ್ಥಳ |
|---|---|---|---|
| ಅಡುಗೆತಯಾರಕರು | 03-07-2017 | ಬೆಳಗ್ಗೆ 9.30 | ನಂಜರಾಜ ಬಹದ್ದೂರ್ ಛತ್ರ, ಮೆಟ್ರೊಪೋಲ್ ಹೋಟೆಲ್ ಸರ್ಕಲ್ ಹತ್ತಿರ, ಮೈಸೂರು ನಗರ. |
| ಅಡುಗೆ ಸಹಾಯಕರು | 04-07-2017 | | |

ಆದ್ದರಿಂದ, ಮೈಸೂರು ವೆಬ್‌ಸೈಟ್ www.mysore.nic.in. ರಲ್ಲಿ ದಿನಾಂಕ:24-06-2017ರಂದು ಪ್ರಕಟಿಸಲಾಗಿರುವ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅರ್ಹತಾ ಪಟ್ಟಿಯನ್ನು ನೋಡಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಪ್ರಾಯೋಗಿಕ ಪರೀಕ್ಷೆಗೆ ತಪ್ಪದೇ ಹಾಜರಾಗಲು ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನಾ ವೇಳೆಯಲ್ಲಿ ನೀಡಲಾಗಿರುವ ಸ್ವೀಕೃತಿ ಪತ್ರ (Acknowlegement) ತರಲು ತಿಳಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆಯಲ್ಲಿ ಈ ಕೆಳಕಂಡ ಪದಾರ್ಥಗಳಲ್ಲಿ ಯಾವುದಾದರೊಂದು ಆಹಾರ ಪದಾರ್ಥವನ್ನು ತಯಾರಿಸಲು ಲಾಟರಿ ಮುಖಾಂತರ ಅವಕಾಶ ನೀಡಲಾಗುವುದು. **ಅಡುಗೆ ತಯಾರಿಕೆಗೆ ಗರಿಷ್ಠ 30 ನಿಮಿಷಗಳ ಕಾಲಾವಕಾಶವನ್ನು ನಿಗಧಿಪಡಿಸಲಾಗಿದೆ.**

| | |
|---|---|
| 1. ರವೆ ಉಪ್ಪಿಟ್ಟು | 5. ತರಕಾರಿ ಸಾಂಬಾರು |
| 2. ಅವಲಕ್ಕಿ ಉಪ್ಪಿಟ್ಟು | 6. ಪುಳಿಯೊಗರೆ |
| 3. ಚಪಾತಿ | 7. ಪಾಯಸ / ಕೇಸರಿ ಬಾತ್ (ಶಿರಾ) |
| 4. ರಾಗಿ ಮುದ್ದೆ | |

<u>ಅಭ್ಯರ್ಥಿಗಳು ಪ್ರಾಯೋಗಿಕ ಪರೀಕ್ಷೆಯಲ್ಲಿ ಈ ಮೇಲ್ಕಂಡ ಯಾವುದಾದರೂ ಒಂದು ಆಹಾರ ಪದಾರ್ಥವನ್ನು ತಯಾರಿಸಲು ಲಾಟರಿ ಮೂಲಕ ಅವಕಾಶ ನೀಡಿದಾಗ ಅಡುಗೆ ತಯಾರಿಕೆಯಲ್ಲಿ ವಿಫಲವಾದಲ್ಲಿ ಅಥವಾ ನಿಗಧಿ ಪಡಿಸಿರುವ ದಿನಾಂಕದಂದು ಗೈರು ಹಾಜರಾದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ತಿರಸ್ಕರಿಸಲಾಗುವುದು ಎಂದು ತಿಳಿಸಲಾಗಿದೆ."</u>

**<u>ಹೆಚ್ಚಿನ ಮಾಹಿತಿಗಾಗಿ :-</u>**

E-mail ID:- dobcmmysore1@gmail.com
ದೂರವಾಣಿ ಸಂಖ್ಯೆ:- 0821- 2342917

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು.